ಸಿಸಿ ನಂಃ 4102/2023

ಸಿ.ಡಬ್ಲೂ– 8

ಪಿ.ಡಬ್ಲೂ – 6

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**

**ಧಾರವಾಡ.**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಪ್ಪ |
| ತಂದೆಯ ಹೆಸರು | : | ಶಿವಲಿಂಗಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವಾಟರಮ್ಯಾನ |
| ವಾಸ ಸ್ಥಳ | : | ಧಾರವಾಡ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು : **15–12–2025**

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ**

20 ನೇ ಸಪ್ಟೆಂಬರ 2022 ರಲ್ಲಿ ಒಂದು ಆಟೋದಲ್ಲಿ ಅಕ್ಕಿಯನ್ನು ತೆಗೆದುಕೊಂಡು ಹೋಗಿದ್ದರು ಆಗ ನಾನು ಅಂಗನವಾಡಿಯಲ್ಲಿದ್ದ ತೂಕದ ತಕ್ಕಡಿಯಲ್ಲಿ ತೂಕ ಮಾಡಿರುತ್ತೇನೆ. ಒಟ್ಟು 5 ಚೀಲ ಇದ್ದು ಅದರಲ್ಲಿ ತಲಾ ಒಂದು ಚೀಲದಲ್ಲಿ 40 ರಿಂದ 50 ಕೆ.ಜಿ ಅಕ್ಕಿ ಇತ್ತು. ಸಾಕ್ಷಿ ನಿಪಿ.11 ರಲ್ಲಿರುವ ನೋಡಿ ಗುರುತಿಸಿದ್ದು ಅದನ್ನು ಸದರಿ ಸಹಿಯನ್ನು ನಿಪಿ.1 (ಡಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ತೂಕ ಮಾಡುವ ಕಾಲಕ್ಕೆ ಮಾಡಿರುತ್ತೇನೆ.

ಸಿಸಿ ನಂಃ 4102/2023
ಸಿ.ಡಬ್ಲೂ- 8
ಪಿ.ಡಬ್ಲೂ - 6

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

ಪೋಲಿಸರು ನನಗೆ ನೋಟಿಸ್ಸಗೆ ಕೊಟ್ಟು ಬಾ ಎಂದು ಕರೆದಿಲ್ಲ. ನಾನು ವಾಟರಮ್ಯಾನ ಆಗಿದ್ದು ತೂಕ ಮಾಡುವುದಿಲ್ಲ ಎಂದರೆ ಸರಿ. ನಿಪಿ.1 ಕ್ಕೆ ಪೋಲಿಸರು ಹೇಳಿದ ಹಾಗೆ ಸಹಿ ಮಾಡಿದ್ದೆನೆ ಎಂದರೆ ಸರಿ. ಅದರಲ್ಲಿರುವ ವಿಷಯವನ್ನು ನಾನು ಹೇಳಿ ಬರೆಸಿಲ್ಲ ಎಂದರೆ ಸರಿ. ದಿಃ20-09-2022 ರಂದು ಪೋಲಿಸರು ನನಗೆ ಅಕ್ಕಿ ಚೀಲ ತೂಕ ಮಾಡಲು ಹೇಳಿದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೆ ರೀತಿ ಅಂಗನವಾಡಿಯಲ್ಲಿ ನಾನು ಅಕ್ಕಿ ಚೀಲ ತೂಕ ಮಾಡಿ ತಲಾ ಚೀಲ 40 ರಿಂದ 50 ಕೆ.ಜಿ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾವಿನಕೊಪ್ಪ ಗ್ರಾಮದಲ್ಲಿ ರೇಶನ ಅಂಗಡಿ ಇದೆ ಎಂದರೆ ಸರಿ. ಅಂಗನವಾಡಿಯಲ್ಲಿ ಬರುವ ಆಹಾರ ಧಾನ್ಯಗಳು ಪ್ರತ್ಯೇಕ ಪ್ಯಾಕೇಟುಗಳಲ್ಲಿ ಬರುತ್ತವೆ ಎಂದರೆ ಸರಿ. ಸದರಿ ಅಂಗನವಾಡಿಯಲ್ಲಿ ತೂಕ ಮಾಡುವ ತಕ್ಕಡಿ ಇರುವುದಿಲ್ಲ ಎಂಂದರೆ ಸರಿಯಲ್ಲ. ತೂಕ ಮಾಡುವ ಸಮಯಲ್ಲ ಪೋಟೊ ತೆಗೆದಿಲ್ಲ ಎಂದರೆ ಸರಿಯಲ್ಲ. ನನ್ನ ನೌಕರಿ ಇನ್ನು ಖಾಯಂ ಆಗಿಲ್ಲ ಎಂದರೆ ಸರಿ. ಆ ದಿನ ಮತ್ತು ಈ ದಿನ ಪೋಲಿಸರು ಹೀಗೆ ಸಾಕ್ಷಿ ಹೇಳಬೇಕು ಎಂದು ನನಗೆ ಹೇಳಿದ್ದರು ಎಂದರೆ ಸರಿ. ಸದರಿ ಹೇಳಿ ಪ್ರಕಾರ ನಾನು ಈ ದಿನ ಸಾಕ್ಷಿ ಹೇಳಿದ್ದೆನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ತೂಕ ಮಾಡದಿದ್ದರು ಸಹ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿಸಿ ನಂಃ 4102/2023

ಸಿ.ಡಬ್ಲೂ- 8

ಪಿ.ಡಬ್ಲೂ - 6

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**

4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,

ಧಾರವಾಡ.